ಓ ಎಸ್ ನಂಃ 116/2016
ಡಿ ಡಬ್ಲ್ಯೂ ಃ 1

ದಿಃ 04.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ವಿ ಕೆ ವಕೀಲರಿಂದ :-**

ಪಾಟೀ ಸವಾಲು ಮಾಡುವ ಕಾಲದಲ್ಲಿ ನಿಡಿ 80 ರಿಂದ 85 ರ ದಾಖಲಾತಿಗಳನ್ನು ತಾವು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿದ್ದೀರಿ ಎಂದರೆ ಸರಿ. ನಿಡಿ 80 ತಹಶೀಲ್ದಾರ್ ರ ನ್ಯಾಯಾಲಯದಲ್ಲಿ ನಡೆದಿರುವ proceedings list ಎಂದರೆ ಸರಿ. ನಿಡಿ 80 ರ proceedings ಮುಗಿದ ನಂತರ ನಿಪಿ 23 ರ ಮ್ಯುಟೇಷನ್ ಆಗಿದೆ ಎಂದರೆ ಸರಿ. ನಿಡಿ 80 ರ ದಾಖಲಾತಿಯ ಪ್ರಕಾರ ದಾವಾ ಸ್ವತ್ತಿನ ಖಾತೆಯು ಚನ್ನಯ್ಯನವರ ಹೆಸರಿನಲ್ಲಿದ್ದು ಆನಂತರ ಚಲುವಯ್ಯ ನವರ ಹೆಸರಿಗೆ ಪೌತಿ ಖಾತೆ ಆಗದ ಹೊರತು ಗಾಳಪ್ಪನವರಿಗಾಗಲಿ ಮತ್ತು ಅರಸಮ್ಮನವರಿಗಾಗಲಿ ಖಾತೆ ಮಾಡಲು ಸಾಧ್ಯವಿಲ್ಲ ಎಂದು ವರದಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರಿದು ಚಲುವಯ್ಯನವರ ಹೆಸರಿಗೆ ಖಾತೆ ವರ್ಗಾವಣೆ ಆದ ನಂತರ ನಮ್ಮ ಹೆಸರಿಗೆ ದಾವಾ ಸ್ವತ್ತಿನ ಖಾತೆ ವರ್ಗಾವಣೆ ಆಗಿದೆ ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆಯು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ನ ಆದೇಶದ ಅನುಸಾರವಾಗಿ ತಮ್ಮ ಹೆಸರಿಗೆ ಖಾತೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 23 ರ ಪ್ರಕಾರ ತಾವು ಉಪವಿಭಾಗಾಧಿಕಾರಿಗಳ ಆದೇಶದಂತೆ ದಾವಾ ಸ್ವತ್ತಿನ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ತಾವು ಖಾತೆಯನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.